

# ಇದು ಬೊನೋಬೊ ಆಟವಯ್ಯಾ..!

ಮಂಗ, ಲೆಮೂರ, ಟ್ರೇಸಿಯರ್ಸ್, ಚಿಂಪಾಂಜಿ ಮೊದಲಾದವು ಹೆಚ್ಚು ಕಡಿಮೆ ಒಂದೇ ಜಾತಿಯವು. ಈ ಜಾತಿಯ ಜೀವಿಗಳು ಉಳಿದ ಜೀವಿಗಳಿಗಿಂತ, ಕಿಡಿಗೇಡಿತನದಲ್ಲಿ ಒಂದು ಹೆಜ್ಜೆ ಮುಂದಿರುತ್ತವೆ. ಅವು ಕುಳಿತಲ್ಲಿ ಕೂಡುವುದಿಲ್ಲ, ನಿಂತಲ್ಲಿ ನಿಲ್ಲುವುದಿಲ್ಲ. ಯಾವಾಗಲೂ ಏನನ್ನಾದರೂ ಮಾಡುತ್ತಲೇ ಇರುತ್ತವೆ. ಹಾಗೆ ಮಾಡುವುದರಲ್ಲಿಯೇ ಅವು ಸಂತೋಷಪಡುತ್ತವೆ.

ಬೊನೋಬೊಗಳೆಂದರೆ ಚಿಕ್ಕ ಗಾತ್ರದ ಚಿಂಪಾಂಜಿಗಳು. ಅವುಗಳ ಮಂಗಾಟವನ್ನು ನೋಡಿ, ಅನುಭವಿಸಿ, ಆನಂದಿಸಿದವರು ಪ್ರಿಮೇಟ್ಸ್ (ಮಂಗ ಜಾತಿಯ ಪ್ರಾಣಿಗಳ ಗುಂಪು) ತಜ್ಞೆ ಎಮಿಲಿ ಜೆಂಟಿ. ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ 36 ವರ್ಷದ ಈ ಮಹಿಳೆ ಬೊನೋಬೊಗಳ ಜೀವನ–ನಡೆಗಳ ಕುರಿತು ಅಧ್ಯಯನ ಮಾಡುತ್ತಿದ್ದರು. ತಾನು ನೋಡಿದ್ದನ್ನು ಬೇರಯವರೂ ನೋಡಿ ಆನಂದಿಸಲೆಂದು ತಮ್ಮ ಕ್ಯಾಮರಾದಲ್ಲಿ ಈ ಅಪರೂಪದ ಚಿತ್ರಗಳನ್ನು ಅವರು ಸೆರೆಹಿಡಿದಿದ್ದಾರೆ.

ಕಾಂಗೋದ ಕಿನ್ಸಾಸಾ ಎಂಬ ಪಟ್ಟಣದ ಪಕ್ಕದಲ್ಲಿರುವ ಒಂದು ಅಭಯಾರಣ್ಯದಲ್ಲಿ ಬೊನೋಬೋಗಳ ಚಿತ್ರವಿಚಿತ್ರ ಆಟ ನಡೆಯುತ್ತದೆ. ಇದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಅವು ಮನುಷ್ಯರಂತೆ ನರ್ತಿಸುತ್ತವೆ, ಕುಸ್ತಿ ಆಡುತ್ತವೆ, ಬೆನ್ನಮೇಲೆ ಮಲಗಿ ಕಾಲುಗಳ ಮೂಲಕ ಮಕ್ಕಳನ್ನು ಮೇಲಕ್ಕೆತ್ತಿ ಆಡಿಸುತ್ತವೆ. ಅಷ್ಟೇ ಏಕೆ ತಲೆ ಕೆಳಗಾಗಿ ನಿಂತು ಶೀರ್ಷಾಸನವನ್ನೂ ಹಾಕುತ್ತವೆ. ಒಂದಕ್ಕೊಂದು ಮುತ್ತು ನೀಡಿ ಮುದ್ದಾಡುತ್ತವೆ.



ಈ ಮಂಗಾಟಕ್ಕೆ ಮೈದಾನವಾಗುವುದು ನೀರು–ರಾಡಿ ತುಂಬಿದ ಒಂದು ಕೊಳ. ಬೊನೋಬೊಗಳ ಕಪ್ಪಾದ.. ದಪ್ಪನೆಯ ರೋಮಗಳನ್ನು ಅದು ತೋಯಿಸಿಬಿಡುತ್ತದೆ. ಹಾಗೆ ತೋಯಿಸಿಕೊಳ್ಳುವುದರಲ್ಲಿಯೇ ಅವುಗಳಿಗೆ ಒಂದು ಬಗೆಯ ಖುಷಿ. ಮನುಷ್ಯರಾಡುವ ನೀರೋಕುಳಿ ಹಾಗೂ ಹಾಲೋಕುಳಿಗಳನ್ನು ಇದು ನೆನಪಿಸುತ್ತದೆ. ಈ ಮಂಗಾಟ ನೀರು–ರಾಡಿ ತುಂಬಿದ ಕೊಳಕ್ಕೆ ಮಾತ್ರ ಸೀಮಿತವಲ್ಲ. ಅದು ಪಕ್ಕದ ಹಸಿರು ಹುಲ್ಲಿಗೂ ವಿಸ್ತರಿಸುವುದುಂಟು.



★ **ಸುಭಾಸ ಯಾದವಾಡ**